# ಒಂದು ಪತ್ರದ ಸುತ್ತಮುತ್ತ

(ಹಿಂದಿನ ಸಂಚಿಕೆಯಿಂದ ಮುಂದು ವರೆದುದು)

ಸ್ವಾಮಿ ಕರುಣಾಕರಾನಂದ

"ಹಸಿದ ಹೊಟ್ಟೆಗೆ ಧರ್ಮಬೋಧನೆ ಸಲ್ಲದು"—ಇದು ವಿವೇಕಾನಂದರ ಧೋರಣೆಯಾಗಿತ್ತು. ಸ್ವಾಮಿ ವಿವೇಕಾನಂದರು, ಅಮೆರಿಕದಲ್ಲಿ ನೀಡಿದ ಭಾಷಣದಲ್ಲಿ, "ನನ್ನ ದೇಶದಲ್ಲಿ ಕೈಗಾರಿಕೆಯ ಉದ್ದೇಶಕ್ಕಾಗಿ ಸನ್ಯಾಸಿಗಳನ್ನು ಸಂಘಟಿಸುವುದೇ ನನ್ನ ಧ್ಯೇಯ. ಇದರಿಂದ ಅವರು ಜನರಿಗೆ ಕೈಗಾರಿಕೆಯ ಜ್ಞಾನವನ್ನು ನೀಡಿ ಅವರ ಉನ್ನತಿಯನ್ನು ಸಾಧಿಸಿದಂತಾಗುತ್ತದೆ" ಎಂದು ಹೇಳಿದ್ದನ್ನು "ಡೈಲಿ ಗ್ಯಾಜೆಟ್" ೧೮೯೩ರ ಆಗಸ್ಟ್ ೨೯ರ ಸಂಚಿಕೆಯು ವರದಿ ಮಾಡಿರುತ್ತದೆ. "ಸಲೇಮ್ ಈವ್‌ನಿಂಗ್ ನ್ಯೂಸ್" ಅದೇ ದಿನಾಂಕದ ತನ್ನ ಸಂಚಿಕೆಯಲ್ಲಿ ಹೀಗೆ ವರದಿ ಮಾಡುತ್ತದೆ: 'ಧರ್ಮಪ್ರಚಾರಕ್ಕಾಗಿ ನಮ್ಮ ದೇಶಕ್ಕೆ ಮಿಷನರಿಗಳನ್ನು ಕಳುಹಿಸುವುದಕ್ಕಿಂತ ಅವರಿಗೆ ಕೈಗಾರಿಕೆಯಲ್ಲಿ ಶಿಕ್ಷಣ ನೀಡುವವರನ್ನು ಕಳುಹಿಸಿಕೊಡಿರೆಂದು ಅವರು ಅಮೆರಿಕನ್ನರಿಗೆ ಹೇಳಿದರು." ಇದರಿಂದ ನಮಗೆ ತಿಳಿಯುವುದೇನೆಂದರೆ ಎಲ್ಲ ಬಗೆಯ ಜನರಿಗೆ ವಿವೇಕಾನಂದರು ಕೇವಲ ಸಾಂಪ್ರದಾಯಿಕ ವಿಚಾರಗಳನ್ನು ಬೋಧಿಸುವ ಒಬ್ಬ ವಿರಕ್ತ ಸನ್ಯಾಸಿಯಾಗಿರಲಿಲ್ಲ. ಬದಲಾಗಿ ಜನಕ್ಕೆ ಸಾಂಪ್ರದಾಯಿಕ ಮೌಲ್ಯಗಳನ್ನು ಅತ್ಯಾಧುನಿಕ ರೀತಿಯಲ್ಲಿ, ಕಾರ್ಯರೂಪಕ್ಕೆ ತರುವಂತೆ ಮಾಡಬಲ್ಲ ಸಂನ್ಯಾಸಿಯಾಗಿದ್ದರು. ಅವರ ಈ ಆಲೋಚನೆಗಳ ಧಾಟಿ ಅವರ ನೆಚ್ಚಿನ ಶಿಷ್ಯೆ, ಸ್ನೇಹಿತರಾದ ಜೋಸೆಫಿನ್ ಮೆಕ್ಲಾಯ್ಡ್‌ಗೆ ತಿಳಿದಿತ್ತು. ಮೆಕ್ಲಾಯ್ಡ್ ಟಾಟಾರವರ ಬಲಗೈಯಾಗಿದ್ದ ಪಾದ್‌ಷಾಹ್‌ರಿಂದ ಟಾಟಾರವರ ಪರಿಚಯಕ್ಕೆ ಬಂದರು. ನಂತರ ಈ ಸಂಪರ್ಕವೇ ಅವರಿಗೆ ನಿವೇದಿತಾಳನ್ನು ಟಾಟಾರವರಿಗೆ ಪರಿಚಯಿಸಲು ಕಾರಣವಾಯಿತು.

ಟಾಟಾರವರು ಸ್ವಾಮಿಜಿಗೆ ಬರೆದ ಪತ್ರಕ್ಕೆ ಸ್ವಾಮಿಜಿಯವರ ಪ್ರತಿಕ್ರಿಯೆ ಏನೆಂದು ಕಂಡುಬರದಿದ್ದರೂ ೧೮೯೯ರ ಏಪ್ರಿಲ್ "ಪ್ರಬುದ್ಧ ಭಾರತ" ಮಾಸಪತ್ರಿಕೆಯಲ್ಲಿ ಬಹುಶಃ ಸ್ವಾಮೀಜಿಯ ಪ್ರೇರಣೆಯಿಂದಲೊ ಎಂಬಂತೆ ಟಾಟಾರವರ ಯೋಜನೆಯನ್ನು ಕುರಿತು ಸಮರ್ಥಿಸುತ್ತ ಹೀಗೆ ಪ್ರಕಟವಾಯಿತು:

"....ನಾವು ಪುನರುಚ್ಚರಿಸುತ್ತೇವೆ: ಇದುವರೆಗೆ ಇಡೀ ದೇಶದ ಒಳಿತನ್ನು ಕುರಿತ ಇಂತಹ ಇನ್ನೊಂದು ಆಲೋಚನೆ ಆಧುನಿಕ ಭಾರತದ ದಿಗಂತದಲ್ಲಿ ಮೂಡಿರಲಿಲ್ಲ. ಆದ್ದರಿಂದ ಸಮಸ್ತ ರಾಷ್ಟ್ರವು ತನ್ನ ಮತ-ಪಂಗಡಗಳ ಹಿತಾಸಕ್ತಿಯನ್ನು ಮರೆತು ಈ ಯೋಜನೆಯನ್ನು ಕಾರ್ಯಗತಗೊಳಿಸಲು ಒಗ್ಗೂಡಲಿ". ಇನ್ನೊಮ್ಮೆ ಸ್ವಾಮಿಜಿಯ ಜೀವಿತಾವಧಿಯಲ್ಲೇ ೧೯೦೧ರ ಮಾರ್ಚ್ ತಿಂಗಳ "ಪ್ರಬುದ್ಧಭಾರತ"ದ ಸಂಪಾದಕೀಯವು, ವಿಕ್ಟೋರಿಯಾ ರಾಣಿಯ ೧೮೫೮ರ "ಶಾಂತಿಯುತವಾಗಿ ಭಾರತೀಯ ಕೈಗಾರಿಕೆಯನ್ನು ಹುರಿದುಂಬಿಸುವಿಕೆಯ ಮಹದಾಕಾಂಕ್ಷೆಯನ್ನು" ಸ್ಮರಿಸಿಕೊಟ್ಟು, ಟಾಟಾರವರ ಯೋಜನೆಗೆ ರಾಣೀಮನೆತನದಿಂದ ಸಹಾಯ ಒದಗಲೆಂದು ಆಶಿಸಿ, ಕೊನೆಯಲ್ಲಿ ವೈಸ್‌ರಾಯ್‌ರನ್ನೂ ಉದ್ದೇಶಿಸಿತ್ತು. ೧೯೦೨ರ ಮಾರ್ಚ್ ತಿಂಗಳಿನಲ್ಲಿ, "ಸರಕಾರವು ಟಾಟಾರವರ ಕಲ್ಪನೆಯನ್ನು ಕೊನೆಗೂ ಅಂಗೀಕರಿಸಿ 'ಭಾರತೀಯ ಸಂಶೋಧನಾ ಸಂಸ್ಥೆ' ಎಂಬ ಹೆಸರಿನಲ್ಲಿ ಬೆಂಗಳೂರಿನಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಲು ತೀರ್ಮಾನಿಸಿದೆ" ಎಂಬ ವಾರ್ತೆಯನ್ನು "ಪ್ರಬುದ್ಧ ಭಾರತ" ಸಣ್ಣದಾಗಿ ಪ್ರಕಟಿಸಿತು.

೧೮೯೮ರಲ್ಲಿ ಟಾಟಾರವರು ತಮ್ಮ ಆಸ್ತಿಯ ಬೃಹತ್ ಮೊತ್ತ ಎಂದರೆ, ೩೦ ಲಕ್ಷದ ಒಂದು ದಸ್ತಾವೇಜನ್ನು ಮಾಡಿ ಅದರಿಂದ ಬರುವ ವಾರ್ಷಿಕ ೧,೨೫,೦೦೦ ರೂಪಾಯಿಗಳನ್ನು ಸ್ನಾತಕೋತ್ತರ ಶಿಕ್ಷಣ ಸಂಸ್ಥೆಯ (Post-graduate Educational Institute) ನಿರ್ವಹಣೆಗಾಗಿ ವಿನಿಯೋಗಿಸಲಾಗುವುದೆಂಬ ವಿಷಯವನ್ನು ಬಹಿರಂಗಪಡಿಸಿದರು. ಸ್ವಾಮಿಜಿಯ ಇಚ್ಛೆಯನ್ನು ಸದಾ ಕಾರ್ಯಗತಗೊಳಿಸಲು ಹಂಬಲಿಸುತ್ತಿದ್ದ ಸೋದರಿ ನಿವೇದಿತಾ ಈಗ ಟಾಟಾರ ಯೋಜನೆಗೆ ತಾನೂ ಬಹಳ ಉತ್ಸಾಹವನ್ನು ತೋರಿದಳು. ಈಗಾಗಲೇ ಹೇಳಿದಂತೆ, ೧೮೯೯ರ ಮಧ್ಯದಲ್ಲಿ ಟಾಟಾರವರ ಬಲಗೈ ಬಂಟರಾಗಿದ್ದ ಬುರ್ಜೋರ್‌ಜಿ ಪಾದ್‌ಶಾಹ್‌ರನ್ನು ಮೆಕ್ಲಾಯ್ಡ್‌ಳು ನಿವೇದಿತಾಳಿಗೆ ಪರಿಚಯಿಸಿದ್ದಳು. ಬೇಗನೆ ಅವರಿಬ್ಬರೂ ಬಹಳ ಸ್ನೇಹಿತರಾದರು. ನಿವೇದಿತಾಳು ೧೮೯೯, ಜನವರಿ ೩೦ರಂದು ಮೆಕ್ಲಾಯ್ಡ್‌ಳಿಗೆ ಬರೆದ ಪತ್ರದಲ್ಲಿ ಆತನನ್ನು ಹೊಗಳಿ ಬರೆದಿದ್ದಾಳೆ: ".. ಅವರಲ್ಲಿ ಮಹಾನ್ ವ್ಯಕ್ತಿಗಳನ್ನಾಗಿ ಮಾಡುವ ಗುಣಗಳಿಗಿಂತ, ನಾಯಕರ ಗುಣಗಳು ಎದ್ದು ಕಾಣುತ್ತವೆ. ಅವರ ಸೋದರಿ ಒಬ್ಬ ಸಾಧ್ವಿ." ಶ್ರೀ ಪಾದ್‌ಶಾಹ್‌ರವರು ಸ್ವಾಮಿಜಿಯವರನ್ನು ಭೇಟಿ ಮಾಡಿದ್ದನ್ನು ನಿವೇದಿತಾಳು ತನ್ನ ಫೆಬ್ರವರಿ ೭ರ ಪತ್ರದಲ್ಲಿ ಮೆಕ್ಲಾಯ್ಡ್‌ಳಿಗೆ ಬರೆಯುತ್ತಾಳೆ : "ಶ್ರೀ ಪಾದ್‌ಶಾಹ್ ದಂಪತಿಗಳು ನಿಜಕ್ಕೂ ದೇವತೆಗಳು.. ಅವರಂತಹ ಸ್ನೇಹಿತರನ್ನು ನನಗೆ ಕೊಟ್ಟ ನೀನೂ (ಮೆಕ್ಲಾಯ್ಡ್) ಒಬ್ಬಳು

ದೇವತೆ. ಅವರು ಕಳೆದ ಗುರುವಾರ ಇಲ್ಲಿಗೆ ಚಹಾಗೆ ಬಂದಿದ್ದರು. ಸ್ವಾಮಿಜಿಯವರ ಪಾದದ ಬಳಿಯಲ್ಲಿ ಕುಳಿತು ಮೂರ್ತಿಪೂಜೆಯ ಬಗ್ಗೆ ಪ್ರವಚನವನ್ನು ಕೇಳುತ್ತಿದ್ದರು.."

ಟಾಟಾರ ಯೋಜನೆ ಎಷ್ಟೇ ಉದಾತ್ತವಾಗಿದ್ದರೂ, ಬ್ರಿಟಿಷ್ ಸರ್ಕಾರ ಎಲ್ಲ ವಿಧಗಳಿಂದಲೂ ಈ ಯೋಜನೆಯ ಮೇಲೆ ತಣ್ಣೀರೆರೆಚುತ್ತ ಬಂದಿತು. ಯೋಜನೆಗೆ ಹಣ ಸಾಲದೆಂಬ ಕುಂಟುನೆಪವೊಡ್ಡಿತು. ಯೋಜನೆಯಿಂದ ಹೆಚ್ಚು ಜನರಿಗೆ ಪ್ರಯೋಜನವಾಗದು, ಆದ್ದರಿಂದ ಇಂತಹದೊಂದು ಪ್ರಯತ್ನ ವ್ಯರ್ಥವೆಂದಿತು. "ಬೆಂಗಾಲಿ" ಪತ್ರಿಕೆಯಲ್ಲಿ ೧೯೦೫, ಜನವರಿ ೧೪ರಂದು ವೈಸ್‌ರಾಯ್ ಮಾಡಿದ ನೀರಸ (ಅದರೆ ನಾಜೂಕಾದ ಭಾಷೆಯಲ್ಲಿದ್ದ) ಪ್ರತಿಕ್ರಿಯೆಯು ಪ್ರಕಟವಾಯಿತು. ವೈಸ್‌ರಾಯ್‌ರವರು ಅಭಿಪ್ರಾಯಪಟ್ಟಂತೆ ಯೋಜಿತ ಸಂಸ್ಥೆಯಿಂದ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲಾರದು ಎಂದಿತ್ತು. ಅದೇ ಪತ್ರಿಕೆಯಲ್ಲಿ ಮೈಸೂರಿನ ದಿವಾನರು ರಾಜ್ಯದ ಪರವಾಗಿ ಐದೂವರೆಲಕ್ಷ ರೂಪಾಯಿಗಳನ್ನು ನೀಡಲು ಮುಂದಾಗಿದ್ದ ಸುದ್ದಿಯೂ ಪ್ರಕಟಗೊಂಡಿತ್ತು. ದಿವಾನರಾದ ಶ್ರೀ ಶೇಷಾದ್ರಿ ಅಯ್ಯರ್‌ರವರು ತೀರಿಕೊಂಡ ಮೇಲೆ, ಮುಂದೆ ಮೈಸೂರು ರಾಜಮನೆತನವು ವೈಸ್‌ರಾಯರ ಕುಪ್ರೇರಣೆಗೆ ಬಲಿಯಾಗಿ ತನ್ನ ಪೂರ್ವನಿರ್ಧಾರಿತ ಮೊತ್ತವನ್ನು ಕೇವಲ ಮೂವ್ವತ್ತು ಸಾವಿರ ರೂಪಾಯಿಗಳಿಗೆ ಸೀಮಿತಗೊಳಿಸಿತು.

ಶ್ರೀ ಶಂಕರೀಪ್ರಸಾದ್ ಬಸು ಬರೆಯುತ್ತಾರೆ: "....ಟಾಟಾರವರ ಯೋಜನೆಗೆ ಸರ್ಕಾರದವರ ವಿರೋಧವು ಹೆಚ್ಚುತ್ತಿರುವ ಸಂದರ್ಭದಲ್ಲೇ ಶ್ರೀಮತಿ ಓಲಿ ಬುಲ್ ಮತ್ತು ನಿವೇದಿತಾರಿಬ್ಬರೂ ಸೇರಿ, ಶಿಕ್ಷಣ ಇಲಾಖೆಯ ಲಾರ್ಡ್ ಬರ್ಡ್‌ವುಡ್‌ರೊಂದಿಗೆ ಟಾಟಾರ ಸಂದರ್ಶನ ವನ್ನು ಏರ್ಪಡಿಸಿದ್ದರು." ನಿವೇದಿತಾಳ, ನವೆಂಬರ್ ೫, ೧೯೦೦ರ ಪತ್ರದಲ್ಲಿ ಆ ಸಂದರ್ಶನದ ಒಂದು ನೋಟ ನಮಗೆ ಸಿಗುತ್ತದೆ. ಆ ಪತ್ರವು ಭಾರತದ ಪ್ರಖ್ಯಾತ ವಿಜ್ಞಾನಿ ಡಾ. ಜಗದೀಶ್ ಚಂದ್ರ ಬೋಸ್‌ರವರಿಗೆ ಬರೆಯಲಾಗಿತ್ತು. ನಿವೇದಿತಾಳ ಉದ್ದೇಶ, ಟಾಟಾರ ಯೋಜನೆಯ ಕುರಿತು ಬರ್ಡ್‌ವುಡ್‌ರಂತಹ ಸರ್ಕಾರಿ ವ್ಯಕ್ತಿಗಳ ಸಹಾನುಭೂತಿ ಪಡೆದು ಭಾರತ ಸರ್ಕಾರದ ಮೇಲೆ ಒತ್ತಡ ಹೇರುವುದು. ಆದರೆ ಪತ್ರದ ಒಕ್ಕಣೆಯಂತೆ ಈ ಕೆಲಸ ನಿರೀಕ್ಷಿಸಿದಷ್ಟು ಫಲಪ್ರದವಾಗಲಿಲ್ಲ. ಇದಕ್ಕೆ ಮುಖ್ಯ ಕಾರಣ ಸಂಸ್ಥೆಯು ಭಾರತೀಯರ ಸುಪರ್ದಿಯಲ್ಲಿರುವುದು. ಆದರೆ, ಬ್ರಿಟಿಷರು ಈ ಕಾರಣವನ್ನು ಕೊಡದೆ, ಸುತ್ತೂಬಳಸಿ ಮಾತನಾಡುತ್ತಿದ್ದರು. ನಿವೇದಿತೆಯ ಪ್ರಯತ್ನ ಇಲ್ಲಿಗೇ ಮುಗಿಯಲಿಲ್ಲ. ಇದಕ್ಕಾಗಿ ವಿದೇಶದ ಪ್ರಸಿದ್ಧ ವ್ಯಕ್ತಿಗಳ ಸಹಾನುಭೂತಿಯನ್ನು ಸಂಪಾದಿಸಲು ಅಮೆರಿಕದ ಸುಪ್ರಸಿದ್ಧ ತತ್ತ್ವಶಾಸ್ತ್ರಜ್ಞರಾದ ಡಾ. ವಿಲಿಯಮ್ ಜೇಮ್ಸ್‌ರಿಗೆ ತಮ್ಮ ಅಭಿಪ್ರಾಯವನ್ನು ನೀಡುವಂತೆ ಪತ್ರ ಬರೆದಳು. ಅದಕ್ಕೆ ಡಾ.ಜೇಮ್ಸ್‌ರಿಂದ ಸಕಾರಾತ್ಮಕವಾದ ಉತ್ತರ, ಸಲಹೆಗಳು ಬಂದವು. ನಿವೇದಿತಾಳು ಈ ಪತ್ರದ ಜೊತೆಗೆ, ತಾನು ಕೈಯ್ಯಾರೆ ಮನವಿಪತ್ರವೊಂದನ್ನು ಬರೆದು ವಿದೇಶದಲ್ಲಿದ್ದ ಪ್ರಸಿದ್ಧ ವ್ಯಕ್ತಿಗಳಿಗೆ ಕಳಿಸಿ ಅವರ ಅಭಿಪ್ರಾಯಗಳನ್ನು ಸಂಗ್ರಹಿಸಲು ಯೋಜಿಸಿದಳು. ವಿವಿಧ ಪತ್ರಿಕೆಗಳಲ್ಲಿ ಈ ಕುರಿತು ಲೇಖನಗಳನ್ನು ಬರೆದಳು. ಅಂತಹ ಒಂದು ಲೇಖನವನ್ನು ಸ್ವಾಮಿಜಿಗೆ ಕಳಿಸಿರುವುದಾಗಿ ಮೆಕ್ಲಾಯ್ಡ್‌ಗೆ ಬರೆದ ನಿವೇದಿತಾಳ ಜನವರಿ ೨೫, ೧೯೦೧ರ ಪತ್ರ ತಿಳಿಸುತ್ತದೆ.

ಭಾರತ ಸರ್ಕಾರವು, ಟಾಟಾರವರ ಯೋಜನೆಯನ್ನು ಓರ್ವ ತಜ್ಞರಿಂದ ಪರಿಶೀಲನೆಗೆ ಒಳಪಡಿಸಬೇಕೆಂದು ಸಲಹೆ ನೀಡಿತು. ೧೯೦೦ರ ಕೊನೆಯಲ್ಲಿ ಭಾರತಕ್ಕೆ ಬಂದಿದ್ದ ಪ್ರಸಿದ್ಧ ರಸಾಯನ ವಿಜ್ಞಾನಿ ವಿಲಿಯಮ್ ರ್‍ಯಾಮ್ಸೆಯವರಿಗೆ ಇದನ್ನು ಒಪ್ಪಿಸಲಾಯಿತು. ಅವರ ವರದಿಯಲ್ಲಿ, ವೈಸ್‌ರಾಯ್ ಲಾರ್ಡ್ ಕರ್ಜನ್ ಅಭಿಪ್ರಾಯಪಟ್ಟಂತೆ ಪದವೀಧರರಿಗೆ ವಿಜ್ಞಾನಿಗಳ ಹುದ್ದೆಗಳು ಸಿಕ್ಕುವ ಅವಕಾಶಗಳು ಕಡಿಮೆಯೆಂದಿದ್ದರೂ, ಹೊಸ ಹೊಸ ಕೈಗಾರಿಕೆಗಳನ್ನು ಸೃಷ್ಟಿಸಬಹುದೆಂದೂ, ಹಳೆಯ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಬಹುದೆಂದೂ ಸಲಹೆ ನೀಡಿದ್ದರು. ಭಾರತೀಯ ಕೈಗಾರಿಕೆಗಳ ವಿಸ್ತರಣೆಯಿಂದ ವ್ಯಾಪಾರ ಜಗತ್ತಿನ ಪ್ರತಿ ಕ್ಷೇತ್ರದಲ್ಲೂ ವಿಜ್ಞಾನಿಗಳಿಗೆ ಉದ್ಯೋಗಗಳು ಸೃಷ್ಟಿಯಾಗುವುದೆಂದು ಅಭಿಪ್ರಾಯಪಟ್ಟಿದ್ದರು. ಇದಕ್ಕಾಗಿ ಬೆಂಗಳೂರು ಸೂಕ್ತವೆಂದು ತಿಳಿಸಿದ್ದರು. ಟಾಟಾರವರು ೧೯೦೦ರಲ್ಲಿ ಇಂಗ್ಲೆಂಡಿಗೆ ಹೋಗಿದ್ದಾಗ ಅಲ್ಲಿ ಭಾರತ ಸರ್ಕಾರಕ್ಕೆ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ, ಲಾಡ್ ಜಾರ್ಜ್ ಹ್ಯಾಮಿಲ್ಟನ್‌ರನ್ನು ಕಂಡು ಅವರ ಸಹಾನುಭೂತಿಯನ್ನು ಗಳಿಸಲು ಪ್ರಯತ್ನಿಸಿದರು. ಸತತ ಪ್ರಯತ್ನ ಹಾಗೂ ಬಿಡದ ಛಲದ ಫಲವಾಗಿ ೧೯೦೩ರಲ್ಲಿ ಲಾರ್ಡ್ ಹ್ಯಾಮಿಲ್ಟನ್‌ರವರು ಇಂಗ್ಲೆಂಡಿನ ಸಂಸತ್ತಿಗೆ ಈ ವಿಷಯವನ್ನು ತಿಳಿಸಿ ಕೆಲಸವನ್ನು ಸುಗಮಗೊಳಿಸಿದರು. ಇದರಿಂದ ೧೯೧೧ರಲ್ಲಿ "ಭಾರತೀಯ ಸಂಶೋಧನಾ ಸಂಸ್ಥೆ" ಎಂಬ ಹೆಸರಿನಲ್ಲಿ ಟಾಟಾರವರ ಕನಸು ನನಸಾಯಿತು. ಸರ್ಕಾರವು ಪೂರ್ವ ನಿರ್ಧಾರಿತ ಮೊತ್ತದ ಅನುದಾನ ನೀಡಿತು. ಮೈಸೂರು ಮಹಾರಾಜರೂ ಐದೂವರೆ ಲಕ್ಷ ರೂಪಾಯಿಗಳ ಕೊಡುಗೆಯನ್ನು ಮಾಡಿದರು. ಅದರೆ ಇದನ್ನು ನೋಡಲು ಟಾಟಾರವರು ಬದುಕಿರಲಿಲ್ಲ, ಸ್ವಾಮಿ ವಿವೇಕಾನಂದರೂ ಬದುಕಿರಲಿಲ್ಲ. ಬಹುಶಃ ನಿವೇದಿತಾಳಿಗೆ ಈ ವಿಷಯ ತಿಳಿದಿದ್ದಿರಬಹುದು (ಸಂಸ್ಥೆಯ ಶಂಕುಸ್ಥಾಪನೆ ಆದದ್ದು ಜುಲೈನಲ್ಲಿ, ನಿವೇದಿತಾ ಇಹಲೋಕ ತ್ಯಜಿಸಿದ್ದು


ಬೆಂಗಳೂರಿನ ಭಾರತೀಯ ಸಂಶೋಧನಾ ಸಂಸ್ಥೆ

ಅಕ್ಟೋಬರ್‌ನಲ್ಲಿ). ಈ ಕುರಿತು ನಿವೇದಿತೆಯ ಜೀವನಚರಿತ್ರೆಯಿಂದಾಗಲೀ, ಸ್ವತಃ ಅವಳ ಪತ್ರಸಂಗ್ರಹಗಳಿಂದಾಗಲಿ ನಮಗೆ ಏನೂ ತಿಳಿಯುವುದಿಲ್ಲ. ಆದರೆ ಆ ಕಾಲಕ್ಕೆ ಅದೊಂದು ರಾಷ್ಟ್ರಮಟ್ಟದ ಚರ್ಚಾವಸ್ತು ಆಗಿದ್ದುದರಿಂದಲೂ, ಅದರಲ್ಲಿ ಆಕೆಯ ಹೃದಯವೇ ಇದ್ದುದರಿಂದಲೂ, ಖಂಡಿತವಾಗಿಯೂ ನಿವೇದಿತೆಯ ಕಿವಿಯನ್ನು ಈ ಸಂತಸದ ಸುದ್ದಿಯು ಮುಟ್ಟಿಯೇ ಇತ್ತೆಂದು ಊಹಿಸಲು ಏನೂ ಅಭ್ಯಂತರವಿಲ್ಲ.

ಇಷ್ಟೇ ಅಲ್ಲದೆ ನಿವೇದಿತಾಳಿಗೆ ಟಾಟಾರವರ ಬಗ್ಗೆ ಇದ್ದ ಅಭಿಮಾನವು ಅಪಾರ. ಮೊದಲು, ಟಾಟಾರವರು ತಮ್ಮ ಆಸ್ತಿಯಲ್ಲಿ ೬೦ ಲಕ್ಷ ರೂಪಾಯಿ ಮೌಲ್ಯದ ಆಸ್ತಿಯ ಅರ್ಧವನ್ನು ತಮ್ಮ ಯೋಜನೆಗೂ, ಇನ್ನರ್ಧವನ್ನು ತಮ್ಮ ಕುಟುಂಬದವರ ಯೋಗಕ್ಷೇಮಕ್ಕೆ ಆಗುವಂತೆ ಒಂದೇ ನ್ಯಾಸ ಪತ್ರದಡಿಯಲ್ಲಿ ಬರುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರು. ಈ ರೀತಿ ಸಾರ್ವಜನಿಕ ಸ್ವತ್ತನ್ನು ಖಾಸಗಿ ಸ್ವತ್ತಿನೊಂದಿಗೆ ಸೇರಿಸಲಾಗುವುದಿಲ್ಲವೆಂದು ಸರ್ಕಾರವು ಆ ಪ್ರಸ್ತಾವವನ್ನು ತಳ್ಳಿಹಾಕಿತು. ಟಾಟಾರವರು ತೀರಿಕೊಂಡ ನಂತರ, ಅಂದರೆ ೧೯೦೪ರಲ್ಲಿ "ಪಯೋನಿಯರ್" ಎಂಬ, ಅಧಿಕಾರಿವರ್ಗದ ಪರವಾಗಿಯೆ ಮಾತನಾಡುತ್ತಿದ್ದ ಪತ್ರಿಕೆಯು, ಟಾಟಾರವರ ಈ ಕೃತ್ಯವನ್ನು ತನಗೆ ಬೇಕಾದಂತೆ ವ್ಯಾಖ್ಯಾನಿಸುತ್ತ, ಅವರ ಕೀರ್ತಿಗೆ ಕಳಂಕ ಹಚ್ಚುವಂತೆ ಬರೆಯಿತು. ಟಾಟಾರವರ ಕೃತ್ಯವನ್ನು ಸಮರ್ಥಿಸುತ್ತ ನಿವೇದಿತಾ "ಸ್ಟೇಟ್ಸ್‌ಮನ್" ಪತ್ರಿಕೆಗೆ ಪತ್ರ ಬರೆದಳು: "ಕೆಲವು ವರ್ಷಗಳ ಹಿಂದೆ ಲಂಡನ್‌ನಲ್ಲಿ ಟಾಟಾರವರ ಯೋಜನೆಗೆ ಸಂಬಂಧಿಸಿದಂತೆ ಭಾರತ ಕಛೇರಿಯ ಸದಸ್ಯರು ಮತ್ತು ಇತರರು ನಡೆಸಿದ ಹಲವು ಸಭೆಗಳಲ್ಲಿ ಭಾಗವಹಿಸುವ ಅವಕಾಶಗಳು ನನಗೂ ಸಿಕ್ಕಿದ್ದವು. ಶ್ರೀಯುತ ಟಾಟಾರವರು ರಾಷ್ಟ್ರಕ್ಕಾಗಿ ೩೦ ಲಕ್ಷ ರೂಪಾಯಿ ಮೌಲ್ಯದ ಆಸ್ತಿಯನ್ನು ಸಮರ್ಪಿಸಿದರು... ನನಗೆ ಅನಿಸಿದಂತೆ ಅದು ವರ್ಷಕ್ಕೆ ೧,೨೫,೦೦೦ ರೂಪಾಯಿಗಳ ಆದಾಯವನ್ನು ಒದಗಿಸುತ್ತದೆ. ಕೂಡಲೇ ಸರ್ಕಾರವು, ಟಾಟಾರವರ ಆಸ್ತಿಯು ಕಾಲಕ್ರಮದಲ್ಲಿ ತನ್ನ ಈಗಿರುವ ಮೌಲ್ಯಕ್ಕಿಂತ ಕಡಿಮೆ ಬೆಲೆಬಾಳುತ್ತದೆಂದು ಆಕ್ಷೇಪಿಸಿತು. ಅದರೆ ಟಾಟಾರವರ ಅಭಿಪ್ರಾಯ ಅದಕ್ಕೆ ವಿರುದ್ಧವಾಗಿತ್ತು. ಆದಾಯದ ವಿಷಯದಲ್ಲಿ ಸರ್ಕಾರಕ್ಕೆ ಆಶ್ವಾಸನೆ ನೀಡುವ ಸಲುವಾಗಿ, ಅವರು ತಮ್ಮ ಮಕ್ಕಳ ಸಲಹೆ-ಸಮ್ಮತಿಗಳ ಮೇಲೆ ಅವರ ಪಾಲಿಗೆ ಬರುತ್ತಿದ್ದ ಉಳಿದರ್ಧ ಆಸ್ತಿಯನ್ನೂ ನ್ಯಾಸ ಪತ್ರಕ್ಕೆ ಸೇರಿಸುವ ಆಲೋಚನೆ ಮಾಡಿದರು. ಅಂದರೆ, ಟಾಟಾರವರು ತಮ್ಮ ಮಕ್ಕಳ ಒಳಿತಿಗಾಗಿ ಭಾರತ ಸರ್ಕಾರವನ್ನೂ 'ತಮ್ಮ ಯೋಜನೆಗೆ ಎಳೆಯುವುದಕ್ಕೆ' ಪ್ರಯತ್ನಿಸಿದ್ದರ ಫಲವಾಗಿ, ಅವರು ರಾಷ್ಟ್ರದ ಒಳಿತಿಗಾಗಿ ತಮ್ಮ ಮಕ್ಕಳನ್ನೇ ಹಸಿವಿನಿಂದ ನರಳುವಂತೆ ಮಾಡಲು ತಯಾರಾಗಿದ್ದರೆಂದಾಯಿತು" (ನೋಡಿ, *Sister Nivedita's Lectures and Writings*, Calcutta: Sister Nivedita Girls' School, 1975, p. 352)

ಬಹುಶಃ ಭಾರತೀಯ ಸಂಶೋಧನಾ ಸಂಸ್ಥೆಯ (The Indian Institute of Science) ಹಿಂದೆ ಇಷ್ಟೊಂದು ಕತೆಯಿದೆಯೆಂದು ಸ್ವತಃ ಟಾಟಾರವರ ಜೀವನಚರಿತ್ರಕಾರರಿಗೂ ಗೊತ್ತಿದ್ದಂತೆ ತೋರುವುದಿಲ್ಲ. ಏಕೆಂದರೆ ಅವರ ಜೀವನ ಚರಿತ್ರೆಯಲ್ಲಿ, ಟಾಟಾರವರು ವಿವೇಕಾನಂದರಿಗೆ ಬರೆದ ಪತ್ರವನ್ನು ಮಾತ್ರ, ಅದೂ ಒಂದು ಸಾಮಾನ್ಯ ವಿಷಯವೆಂಬಂತೆ, ಉಲ್ಲೇಖಿಸಿವೆ. ಆದ್ದರಿಂದ ಅವರು ಚಿತ್ರಿಸಿದ ಟಾಟಾರವರ ಚರಿತ್ರೆಯು ಅಪೂರ್ಣವೆಂದೇ ಹೇಳಬೇಕು. ಒಂದು ಬೃಹತ್ ಕಾರ್ಯದ ಹಿಂದೆ ಹಲವರ ತ್ಯಾಗ-ಪರಿಶ್ರಮಗಳಿರುತ್ತವೆ. ಅದನ್ನು ಸಂಶೋಧಿಸಿ ಹೊರತೆಗೆಯುವುದೇ ಆ ಚೇತನಗಳಿಗೆ ನಾವು ಸಲ್ಲಿಸುವ ಅತ್ಯುತ್ತಮ ಶ್ರದ್ಧಾಂಜಲಿ. ರಾಷ್ಟ್ರಕ್ಕೆ ಅವರು ವನಸುಮಗಳಂತೆ ದುಡಿದಿರುವುದನ್ನು ಸ್ಮರಿಸುವುದೇ ನಾವು ಅವರಿಗೆ ಸಲ್ಲಿಸುವ ಕೃತಜ್ಞತೆ, ಪೂಜೆ. ಶ್ರೀ ಶಂಕರಿಪ್ರಸಾದ್ ಬಸುರವರು ಸ್ವಾಮಿ ವಿವೇಕಾನಂದರನ್ನು ಕುರಿತು ನಡೆಸಿದ ತಮ್ಮ ಆಳವಾದ ಸಂಶೋಧನೆಗಳಿಂದ ಅಂಥ ಪೂಜೆಯನ್ನು ಮಾಡಿದ್ದಾರೆ. ಅವರ ಗ್ರಂಥಗಳು (ಎಂಟು ಸಂಪುಟಗಳು) ಸದ್ಯಕ್ಕೆ ಬಂಗಾಳಿ ಭಾಷೆಯಲ್ಲಿ ಮಾತ್ರ ಲಭ್ಯವಿದ್ದು, ಇಂಗ್ಲೀಷೂ ಸೇರಿದಂತೆ ಇತರ ಭಾಷೆಗಳಿಗೆ ಇನ್ನೂ ತರ್ಜುಮೆಗೊಳ್ಳಬೇಕಿದೆ.

## ದೇವರು ನಿದ್ರಿಸುವುದಿಲ್ಲ

ಒಂದು ರಾತ್ರಿ ಲಾಟು (ಮುಂದೆ, ಸ್ವಾಮಿ ಅದ್ಭುತಾನಂದರು) ಶ್ರೀರಾಮಕೃಷ್ಣರಿಗೆ ಗಾಳಿ ಹಾಕುತ್ತಿದ್ದ. ಇಡೀ ದಿನ ಕೆಲಸ ಮಾಡಿ ದಣಿದಿದ್ದ ಅವನಿಗೆ ಮಂಪರು; ನಿದ್ರೆ ಎಳೆಯುಕೊಂಡು ಹೋಗುತ್ತಿದ್ದರೂ, ಗುರುಸೇವೆಯಲ್ಲಿ ಮಾತ್ರ ಕೊರೆಯಾಗಿರಲಿಲ್ಲ. ಇದನ್ನು ಗಮನಿಸಿದ ಶ್ರೀರಾಮಕೃಷ್ಣರು, ನಗುತ್ತ, ಹಾಸ್ಯದೊಂದಿಗೆ "ಲೇಟೋ, ದೇವರು ನಿದ್ರೆ ಮಾಡುವನೆ ಅಥವಾ ಇಲ್ಲವೆ?" ಎಂದು ಕೇಳಿದರು. ಈ ಪ್ರಶ್ನೆಯಿಂದ ಆಶ್ಚರ್ಯಚಕಿತನಾದ ಲಾಟು ತನಗೆ ಗೊತ್ತಿಲ್ಲವೆಂದನು. ಅನಂತರ, ಇನ್ನೂ ಗಂಭೀರವಾಗಿ, ಶ್ರೀರಾಮಕೃಷ್ಣರು, "ಲೋಕದಲ್ಲಿರುವ ಎಲ್ಲರೂ ನಿದ್ರಿಸುವರು, ಆದರೆ ದೇವರು ನಿದ್ರಿಸುವುದಿಲ್ಲ; ಏಕೆಂದರೆ ಅವನು ನಿದ್ರಿಸಿಬಿಟ್ಟರೆ, ಇಡೀ ವಿಶ್ವವೇ ಕತ್ತಲಲ್ಲಿ ಮುಳುಗಿ ಕರಗಿ ಹೋಗುವುದು. ತಾನು ಸೃಷ್ಟಿಸಿದ ಜೀವಿಗಳು ನಿರ್ಭಯವಾಗಿ ನಿದ್ರಿಸಲೋಸುಗ ದೇವರು ಹಗಲೂ ರಾತ್ರಿ ಎಚ್ಚರವಾಗಿರಬೇಕು" ಎಂದರು.

ಲಾಟುವಿಗೆ ಆಶ್ಚರ್ಯವಾಯಿತು. "ದೇವರು ಜೀವಿಗಳು ನಿದ್ರಿಸುವಾಗಲೂ ಕಾಪಾಡುವನೆ? ಅವು ತಮ್ಮ ಸೃಷ್ಟಿಕರ್ತನಾದ ಭಗವಂತನಿಂದಲೇ ಸೇವೆ ಸ್ವೀಕರಿಸುವುವೆ?" ಎಂದು ಕೇಳಿದನು. ಶ್ರೀರಾಮಕೃಷ್ಣರು "ಹೌದು. ನೀನು ಹೇಳಿದ್ದು ಸರಿ. ಅವನೇ ತನ್ನ ಜೀವಿಗಳನ್ನು ತೂಗಿ ನಿದ್ರಿಸುವಂತೆ ಮಾಡುವನು; ತಾನು ಎಚ್ಚರದಿಂದಿದ್ದು ಅವುಗಳನ್ನು ಕಾಯುತ್ತಿರುವನು" ಎಂದರು.



ಸ್ವಾಮಿ ಅದ್ಭುತಾನಂದರು

## ಪ್ರಹಸನ ಪ್ರಸಂಗ

ಬೆಳಿಗ್ಗೆ ಎದ್ದಾಗ ಪತ್ನಿಯು ಪತಿಗೆ ಪ್ರೀತಿಯಿಂದ ಹೇಳಿದಳು, "ರೀ! ನಿನ್ನೆ ರಾತ್ರಿ ಕನಸಿನಲ್ಲಿ ನೀವು ನನಗೆ ಸುಂದರವಾದ ವಜ್ರದ ಉಂಗುರವನ್ನು ಉಡುಗೊರೆಯಾಗಿ ನೀಡಿದಿರಿ. ಇದರ ಅರ್ಥವೇನಿರಬಹುದು?" ಪತಿ ನಗುತ್ತ ಪ್ರೀತಿಯಿಂದ ಉತ್ತರಿಸಿದ, "ಏನಿಲ್ಲ! ಯಾಕಷ್ಟು ಯೋಚನೆ? ಇಂದೇ ನಿನಗೆ ಅದರ ಅರ್ಥವೇನೆಂದು ತಿಳಿಸುವೆ." ಸಂಜೆ ಮನೆಗೆ ಮರಳಿ ಬಂದಾಗ ಕೈಯಲ್ಲಿ ಒಂದು ಆಕರ್ಷಕವಾದ ಉಡುಗೊರೆಯನ್ನು ಪತಿ ಹಿಡಿದಿದ್ದ. ತಡೆಯಲಾರದ ಆಸಕ್ತಿಯಿಂದ ಹೆಂಡತಿ, ಅದನ್ನು ತೆಗೆದುಕೊಂಡು ಬಿಚ್ಚಿದಾಗ ಒಳಗೆ ಇದ್ದದ್ದು, "ನಿನ್ನ ಸ್ವಪ್ನಗಳನ್ನು ತಿಳಿ" ಎಂಬ ವಿವರಣಾತ್ಮಕ ಪುಸ್ತಕ!

ಹತ್ತು ವರ್ಷದ ಎಲ್ಸಿ ಮನೆಯಲ್ಲಿ ಬಹಳ ತುಂಟತನ ಮಾಡುತ್ತಿದ್ದಳು. ಬೇರೆ ವಿಧಿಯಿಲ್ಲದೆ ತಂದೆ ಹಣದ ಆಮಿಷವನ್ನು ಒಡ್ಡಿದ. ಮನೆಕೆಲಸದಲ್ಲಿ ಸಹಕರಿಸಿದರೆ, ಒಳ್ಳೆಯವಳಾಗಿದ್ದರೆ ಪ್ರತಿನಿತ್ಯ ಒಂದು ಡಾಲರ್ ನೀಡುವುದಾಗಿ ಹೇಳಿದ. ಸ್ವಲ್ಪ ದಿನಗಳ ಕಾಲ ಈ ವ್ಯವಸ್ಥೆ ಮುಂದುವರಿಯಿತು. ಒಂದು ವಾರದ ನಂತರ ಎಲ್ಸಿ ತಂದೆಯ ಬಳಿಗೆ ಬಂದು ಇನ್ನು ಮೇಲೆ ಅದನ್ನು ಎರಡು ಡಾಲರ್ ಏರಿಸಬೇಕೆಂದು ಕೇಳಿಕೊಂಡಳು. ಒಂದು ವಾರಕ್ಕೆ ಏಳು ಡಾಲರ್ ದೊರೆತರೆ ಯಥೇಷ್ಟವೆಂದು ತಂದೆ ನಿರಾಕರಿಸಿದ. ಎಲ್ಸಿ ಸುಮ್ಮನಾದಳು. ಸ್ವಲ್ಪ ಹೊತ್ತು ಬಿಟ್ಟು ಮತ್ತೆ ಬಂದು ಹೇಳಿದಳು, "ನೋಡು, ನೀನು ಎರಡು ಡಾಲರ್ ನೀಡು. ಆದರೆ ನಾನು ಪ್ರತಿನಿತ್ಯವೂ ಅದನ್ನು ಸಂಪಾದಿಸಲು ಪ್ರಯತ್ನಿಸುವುದಿಲ್ಲ ಎಂದು ಮಾತು ಕೊಡುವೆ!"

ಒಂದು ಸಾಕುನಾಯಿ ಇನ್ನೊಂದು ನಾಯಿಗೆ ಹೆಮ್ಮೆಯಿಂದ ಹೇಳುತ್ತಿತ್ತು: "ಅಬ್ಬ! ಕಡೆಗೂ ಆ ಮನುಷ್ಯನನ್ನು ಪಳಗಿಸಿದೆ. ಈಗ ಅವನಿಗೆ ಬುದ್ಧಿ ಬಂದಿದೆ. ನಾನು ಚೆಂಡನ್ನು ತಂದುಕೊಟ್ಟಾಗಲೆಲ್ಲ ಬಿಸ್ಕತ್ತನ್ನು ಕೊಡುತ್ತಿದ್ದಾನೆ!"

ವಿದ್ಯಾರ್ಥಿ : ಮೇಷ್ಟ್ರೆ, ನನ್ನ ತಂದೆ ನಾವು ಕಪಿಗಳಿಂದ ಹುಟ್ಟಿಬಂದಿರುವವರು ಎಂದು ಹೇಳುತ್ತಾರೆ.

ಶಿಕ್ಷಕ : ನೋಡು, ನಿಮ್ಮ ಮನೆಯ ವೈಯಕ್ತಿಕ ವಿಚಾರಗಳನ್ನು ಇಲ್ಲಿ ವಿವರಿಸಲಾಗುವುದಿಲ್ಲ.